ಹರಿತಸ, ಬೆಂಗಳೂರು

*ಗೋಡೆಗಳು ಪಾರದರ್ಶಕವಾದರೆ ಹೇಗೆ ರಾಮ್‌ಜೀ?*



ಸುಂದರಿಯರ ಮನೆಗಳ ಸುತ್ತ ಟ್ರಾಫಿಕ್ ಜಾಮ್ ಆಗುತ್ತದೆ.

ಶ್ರೀನಿವಾಸ ಜಿ. ಪದಕಿ, ಮುಂಬಯಿ

*ಅರ್ಧಾಂಗಿ ಅರ್ಧ ಶರೀರವನ್ನೇ ಬೇಡಿದರೆ ಏನು ಮಾಡಬೇಕು ಸಾರ್?*

ಸಂಸಾರವೆಂಬ ಶರೀರಕ್ಕೆ ನೀನರ್ಧ, ನಾನರ್ಧ; ನಾನು **sum**, ನೀನು ಸಾರ ಎಂದು ತಿಳಿಹೇಳಿ.

ಪ್ಲೇಟೊ ಪ್ರಕಾಶ್, ಶಿವಮೊಗ್ಗ

*ಕಾಸಿದ್ದರೆ ಕೈಲಾಸ. ನೋಟಿದ್ದರೆ...?*

ನವೋಲ್ಲಾಸ.

ಪಿ. ಜಯವಂತ ಪೈ, ಕುಂದಾಪುರ

*ವಾರಣಾಸಿಯಲ್ಲಿ ನೂರಾರು ಪುರುಷರು ತಮ್ಮ ಬದುಕಿರುವ ಸತಿಯರಿಗೇ ಶ್ರಾದ್ಧ, ಪಿಂಡಪ್ರದಾನ ಮಾಡಿದರಂತಲ್ಲ...?*

ತಮಗೆ ದಿನವೂ ಮನೆಯಲ್ಲಿ ಆಗುತ್ತಿರುವುದಕ್ಕೆ ಸೇಡು ತೀರಿಸಿಕೊಂಡರೋ ಏನೋ!

ಕೆ.ಎಂ. ವಿಭೂತಿ, ಹರಿಹರ

*ನಾರಿಯರು ಬ್ಲೌಸ್‌ಗಳಿಗೆ ಕಿಟಕಿ ಬಿಡಿಸುವುದು ಎಂತಹ ಫ್ಯಾಷನ್ ಗುರುವೆ?*



ಕಂಪ್ಯೂಟರ್ಸ್ ಫ್ಯಾಷನ್ ಅಂತೆ. ವಿಂಡೋಸ್ 2000, ವಿಂಡೋಸ್ 2008 ವೆಬ್ ಸರ್ವರ್....

ಬಿ. ಚಂದ್ರೇಗೌಡ, ಬೆಂಗಳೂರು

*ಪಕ್ಷಿಗಳಂತೆ ಮನುಷ್ಯ ಕೂಡ ಹಾರುವಂತಿದ್ದರೆ ಹೇಗಿರುತ್ತಿತ್ತು?*

ಹುಡುಗಿಯರನ್ನು ಹಾರಿಸಿಕೊಂಡು ಹೋಗುವುದು ಮಾಮೂಲಾಗುತ್ತಿತ್ತು.

ದೇವೇಂದ್ರ, ಕಡೂರು

*ಕೆಲವರು ಪರರ ವಸ್ತುಗಳನ್ನು ಬಳಸುವುದನ್ನೇ ಹೆಚ್ಚು ಇಷ್ಟ ಪಡುವರಂತೆ?*

ಕೆಲವರಲ್ಲ, ಎಲ್ಲರೂ; ಪರರ ಮಗ/ಮಗಳನ್ನು ವರಿಸಿ, ಆವರಿಸಿ, ಬಳಸುವುದೇ ಜೀವನ.

ಎಂ.ಎ. ಕುಮಾರ್, ಬೆಂಗಳೂರು

*ಸ್ಮಶಾನದ ಸಮೀಪವೇ ಮದ್ಯದಂಗಡಿ ಇರುವುದಿಲ್ಲ. ಏಕೆ?*

ಕುಡಿದು ಬಿದ್ದಿರುವವನನ್ನು ತಪ್ಪಾಗಿ ಹೂತುಬಿಟ್ಟಾರೆಂಬ ಭಯ.

ಮಲ್ಲಿಕಾರ್ಜುನ ಗಚ್ಚಿ, ಗೋಗಿ

*ಮದ್ಯ, ಗುಟ್ಕಾ, ತಂಬಾಕು, ಸಿಗರೇಟುಗಳನ್ನು ಮಾರುಕಟ್ಟೆಯಲ್ಲಿಟ್ಟು ಇವುಗಳ ಸೇವನೆ ಕೆಟ್ಟದೆಂದರೆ ಹೇಗೆ ಸರ್?*

ಸರ್ಕಾರ ತಾನೂ ಉಳಿದು, ಜನರನ್ನೂ ಉಳಿಸಲು ಯತ್ನಿಸಲು ಕೊಟ್ಟೆಚ್ಚರ ಒಂದೇ ಮಾರ್ಗವಂತೆ.

ಎನ್.ಎಸ್. ಚಂದ್ರಶೇಖರ್, ಬೆಂಗಳೂರು

*ಸಾಲಂಕೃತ ಸ್ತ್ರೀಯರನ್ನು ನೋಡಿದಾಗ ತಿಂದುಬಿಡುವಂತೆ ನೋಡುತ್ತಾರೆ ಎನ್ನುವರಲ್ಲ, ಅವರನ್ನು ನೋಡುವುದೇ ತಪ್ಪೆ?*

ಮೆಚ್ಚುದೃಷ್ಟಿ ಇದ್ದರೆ ತಪ್ಪಿಲ್ಲ, ಚುಚ್ಚುದೃಷ್ಟಿ ಇದ್ದರೆ ತಪ್ಪು. ಕೂಲಿಂಗ್ ಗ್ಲಾಸ್ ಬಳಸಿ, ಅಪವಾದ ತಗ್ಗಿಸಿ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

*ಕಂಪನಿ ನಾಟಕಕ್ಕೂ, ಜೀವನನಾಟಕಕ್ಕೂ ಇರುವ ಅಂತರವೇನು ಸಾರ್?*

ಅಲ್ಲಿ ಮೊದಲು ಟಿಕೆಟ್, ನಂತರ ನಾಟಕ. ಇಲ್ಲಿ ಮೊದಲು ನಾಟಕ, ಕೊನೆಯಲ್ಲಿ ಟಿಕೆಟ್.

ಕೆ.ಟಿ. ರುದ್ರಪ್ಪ, ಚಿತ್ರದುರ್ಗ

*ಹಿಗ್ಗಾ ಮುಗ್ಗಾ ಥಳಿಸಿದರು ಎಂದರೆ ಏನು ಅರ್ಥ?*

ದವಡೆಗಳು ಊದುವಂತೆ (ಹಿಗ್ಗಾ ಹಿಗ್ಗುವಂತೆ) ಮೂಳೆ ಮುಗ್ಗಾಗುವಂತೆ (ಮುರಿಯುವಂತೆ) ಹೊಡೆದರೆಂದು.

ಕೊಟ್ಟೂರು ಜವಳಿ ಜಯ್ಯಣ್ಣ, ದಾವಣಗೆರೆ

*ಈಗಿನ ಯೋಗರಾಜ್ ಭಟ್‌ರ ಹಾಡುಗಳಿಗೂ ಆಗಿನ ಚಿ. ಉದಯಶಂಕರರ ಹಾಡುಗಳಿಗೂ ಏನು ವ್ಯತ್ಯಾಸ?*

ಅವರ ಹಾಡುಗಳಲ್ಲಿ ವಿಶಾಲ ಹೃದಯ ಕಂಡುಬರುತ್ತಿತ್ತು, ಇವರದರಲ್ಲಿ ಬಿಚ್ಚು ಮನಸ್ಸು.

## ಬಹುಮಾನಿತ ಪ್ರಶ್ನೆ

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಬಾರ್‌ನವರು ಕುಡಿದವರಿಗೆ ಉಚಿತ ವಾಹನ ವ್ಯವಸ್ಥೆ ಮಾಡಿದರೆ....?*

ಕುಳಿತುಕೊಳ್ಳಲು ಆಗದವರಿಗೆ ಕುಡಿಯುವುದರಿಂದ ಸ್ಟ್ರೆಚರ್ರು, ಆಂಬುಲೆನ್ಸೇ ಬೇಕಾಗುತ್ತದೆ.

ಎ.ಕೆ. ಪಟ್ಟಾಭಿ, ಬೆಂಗಳೂರು

*ಮಾತೇ ಮುತ್ತು. ಹಾಗಾದರೆ ಮೌನದ ಬಗ್ಗೆ ತಾವು ಏನು ಹೇಳುವಿರಿ?*

ಮಾತಿನ ತಾಯಿ. ಮೌನದ ಗರ್ಭದಿಂದಲೇ ಮಾತಿನ ಉದಯ.

ರತ್ನಜ, ಮೈಸೂರು

*ಸೀತೆ ಮುಡಿ ಕಟ್ಟಲ್ಲ; ರಾವಣ ಸತ್ತ; ದ್ರೌಪದಿ ಮುಡಿ ಕಟ್ಟಲ್ಲ. ಕೌರವರು ಸತ್ರು. ಈಗ ಭಾರತನಾರಿ ಮುಡಿ ಕಟ್ಟಲ್ಲ; ಭಯವಾಗ್ತಿದೆಯಲ್ಲಾ...?*

ಆಗ್ಬೇಕಾದ್ದೇ. ಒಂದ್ಸುಡ್ಗೀನ ಕಿಡ್ನ್ಯಾಪ್ ಮಾಡಿ ವಸ್ತ್ರಾಪಹರಣ ಮಾಡಕ್ಕೋದ್ರೀಂದ್ರೇಲೆ.... ಭಯ

ರಮೇಶ್, ಹನುಮನಾಳು

*ಎಲ್ಲಾ ತರಹದ ದೇವತಾ ವಿಗ್ರಹಗಳನ್ನು ತಯಾರಿಸುವ ಶಿಲ್ಪಿಗಳಿಗೆ ಯಾವ ಗ್ರಹದಿಂದ ಉತ್ತಮ ಫಲವಿದೆ?*



ಶಿಲ್ಪಕಲಾ ಪೋಷಕರ ಅನುಗ್ರಹದಿಂದ.

ಆಗ್ಬೇಕಾದ್ದೇ!

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

*ಗಾಯವಿಲ್ಲದ ನೋವು ಯಾವುದು?*

ವಿರಹವೇದನೆ.

ಕೃಷ್ಣಮೂರ್ತಿ ಎಸ್., ಬೆಂಗಳೂರು

*ರಾಮಾನಂದ ಸ್ವಾಮಿಗಳೇ, ನಿಮಗೆ ಶಿಷ್ಯರು ಹೆಚ್ಚೋ, ಶಿಷ್ಯೆಯರು ಹೆಚ್ಚೋ?*

ನಾನು ಹಾಗೆಲ್ಲ ತಾರತಮ್ಯ ಮಾಡುವುದಿಲ್ಲ; ನನಗೆ ಇಬ್ಬರೂ ಹೆಚ್ಚೇ.

■ ರಾಮ್